**ಮೂರನೇ ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಕನಕಪುರ**

**<u>ಸಿ.ಸಿ ನಂ. 127/2015</u>**

ದಿನಾಂಕಃ. **25.02.2026.** ರಂದು ಸಾಕ್ಷಿಗೆ ಮದ್ಯಾಹ್ನ **1** ಗಂಟೆಗೆ ಪ್ರಮಾಣ ವಚನ ಭೋದಿಸಲಾಯಿತು.

| ಚಾಸಾ-**12** | ಪ್ರಾಸಾ-**4** |
|---|---|
| ಹೆಸರು | - ಜಯರಾಂ ಎಂ.ಕೆ |
| ತಂದೆ ಹೆಸರು | - ಪರ್ವತಯ್ಯ |
| ವಯಸ್ಸು | - **66** |
| ಉದ್ಯೋಗ | - ನಿವೃತ್ತ , ಪಿ.ಎಸ್,ಐ |
| ವಿಳಾಸ | - ಚನ್ನಪಟ್ಟಣ |

**<u>ಮುಖ್ಯವಿಚಾರಣೆ : ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರಿಂದಃ-</u>**

ನಾನು **2013** ರಿಂದ **2016** ರವರೆಗೆ ನಾನು ಸಾತನೂರು ಪೋಲಿಸ್ ಠಾಣೆಯಲ್ಲಿ ಪಿ. ಎಸ್. ಐ ಆಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕಃ **08.06.2014** ರಂದು ಚಾ.ಸಾ. **1** ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿನಾಂಕಃ **17.07.2014** ರಂದು ಎಫ್.ಎಸ್. ಎಲ್, ವರದಿಯನ್ನು ಪಡೆದುಕೊಂಡು ತನಿಖೆಯನ್ನು ಮುಕ್ತಾಯಗೋಳಿಸಿ ದೋಷಾರೋಪಣೆ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿದೆ.

ಸಾಕ್ಷಿ ಎಫ್,ಎಸ್.ಎಲ್. ವರದಿಯನ್ನು ನೋಡಿ ಅದರಲ್ಲಿರುವ ಒಂದು ಸಹಿಯನ್ನು ನೋಡಿ ತನ್ನ ಸಹಿ ಮತ್ತು ಸದರಿ ಎಫ್.ಎಸ್.ಎಲ್. ವರದಿ ಎಂದು ಗುರುತಿಸಿದ್ದು, ಸದರಿ ಎಫ್,ಎಸ್.ಎಲ್. ವರದಿಯನ್ನು ನಿಪಿ-**6** ಎಂದು, ಸಾಕ್ಷಿ ಸಹಿಯನ್ನು ನಿಪಿ-**6**(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು: ಆರೋಪಿ ಪರ .ಎಸ್,ಡಿ. ವಕೀಲರಿಂದಃ**

ಆರೋಪಿಯ ಸ್ವ-ಇಚ್ಛಾ ಹೇಳಿಕೆಯ ಪಡೆದ ಬಗ್ಗೆ ಯಾವುದೇ ದೋಷಾರೋಪಣಾ ಪಟ್ಟಿಯಲ್ಲಿ ಇರುವುದಿಲ್ಲ ಎಂದರೆ ಸರಿ. ನಾನು ಘಟನೆ ನಡೆದ ಸ್ಥಳದ ದಾಖಲೆಯನ್ನು ದೋಷಾರೋಪಣಪಟ್ಟಿಯೊಂದಿಗೆ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿದಾರರಿಗೆ ನೋಟಿಸ್ ಕೊಟ್ಟ ಬಗ್ಗೆ ನೋಟಿಸ್ ದೋಷಾರೋಪಣಪಟ್ಟಿಯೊಂದಿಗೆ ಸೇರಿಸಿಲ್ಲ ಎಂದರೆ ಸರಿ.

ನಾನು ಎಫ್.ಎಸ್. ಎಲ್ ವರದಿಯನ್ನು ಪಡೆದುಕೊಳ್ಳದೇ ತನಿಖೆಯಲ್ಲಿ ಆರೋಪಿ ತಪ್ಪು ಮಾಡದೇ ಇರುವುದು ಕಂಡು ಬಂದರೂ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಘಟನೆಗೂ ಸಂಬಂಧ ಇಲ್ಲದಿದ್ದರೂ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಮದ್ಯಾಹ್ನ **1.05** ರವರೆಗೆ ಪಡೆದುಕೊಂಡಿರುತ್ತೇನೆ ಎಂದು ಧೃಢೀಕರಿಸುತ್ತೇನೆ)

ಓದಿ ಹೇಳಿ ಕೇಳಿ ಸರಿ ಇದೆ,
3 ನೇ ಅಪರ ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.
ಕನಕಪುರ